**ಕರ್ನಾಟಕ ಸರ್ಕಾರ**
**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**
**ಆಯುಕ್ತರ ಕಛೇರಿ, ನಂ.16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ,**
**ಮಿಲ್ಲರ್ಸ್ ಕೆರೆ ಅಂಗಳ, ವಸಂತನಗರ, ಬೆಂಗಳೂರು–560052.**

# ಡಿ.ದೇವರಾಜ ಅರಸು ಪ್ರತಿಭಾ ಪುರಸ್ಕಾರ

## ವಿದ್ಯಾರ್ಥಿಗಳಿಗೆ ಸೂಚನೆಗಳು (Instructions to the Students)

**(ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಈ ಸೌಲಭ್ಯವನ್ನು ಪಡೆಯಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ)**

1. 2022ನೇ ವರ್ಷದಲ್ಲಿ ಪದವಿ/ಸ್ನಾತಕೋತ್ತರ ಪದವಿ ಮತ್ತು ವೃತ್ತಿಪರ ಪದವಿ/ವೃತ್ತಿಪರ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿ ಸರಾಸರಿ ಶೇಕಡ 70 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರುವ ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳು ಮಾತ್ರ ಸದರಿ ಕಾರ್ಯಕ್ರಮದಡಿ ಆನ್-ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲು ಅರ್ಹರು.

2. ನಿಗದಿಪಡಿಸಿರುವ ಅರ್ಹತೆಗಳು:
   - ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಖಾಯಂ ನಿವಾಸಿಯಾಗಿರಬೇಕು.
   - ಕರ್ನಾಟಕ ಸರ್ಕಾರ ಅಧಿಸೂಚಿಸಿರುವ ಹಿಂದುಳಿದ ವರ್ಗಗಳ ಪ್ರವರ್ಗ 1, 2ಎ, 3ಎ ಅಥವಾ 3ಬಿ ಗೆ ಸೇರಿರಬೇಕು.
   - ಸರ್ಕಾರಿ/ಮಾನ್ಯತೆ ಪಡೆದ ಅನುದಾನಿತ/ಅನುದಾನ ರಹಿತ ಕಾಲೇಜು/ವಿಶ್ವವಿದ್ಯಾಲಯಗಳಲ್ಲಿ ಪದವಿ/ಸ್ನಾತಕೋತ್ತರ ಪದವಿ ಮತ್ತು ವೃತ್ತಿಪರ ಪದವಿ/ವೃತ್ತಿಪರ ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡಿರಬೇಕು.
   - ಸಮಾನ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಅರ್ಹತೆಯನ್ನಾಧರಿಸಿ ಒಬ್ಬ ವಿದ್ಯಾರ್ಥಿಗೆ ಒಂದು ಬಾರಿ ಮಾತ್ರ ಈ ಸೌಲಭ್ಯವನ್ನು ನೀಡಲಾಗುವುದು.
   - ಕುಟುಂಬದ ಒಟ್ಟು ವಾರ್ಷಿಕ ಆದಾಯಮಿತಿ:
     ಅ. ಪ್ರವರ್ಗ–1 – ರೂ.2.50 ಲಕ್ಷ.
     ಆ. ಪ್ರವರ್ಗ–2(ಎ), 3(ಎ) ಮತ್ತು 3(ಬಿ) – ರೂ.1.00 ಲಕ್ಷ.

3. ಗರಿಷ್ಠ ಭೌತಿಕ ಗುರಿ ಹಾಗೂ ಪ್ರತಿಭಾ ಪುರಸ್ಕಾರದ ಮೊತ್ತ ಈ ಕೆಳಗಿನಂತಿದೆ –

| ಕ್ರ. ಸಂ. | ತರಗತಿ | ಪ್ರತಿಭಾ ಪುರಸ್ಕಾರ ನೀಡುವ ಗರಿಷ್ಠ ವಿದ್ಯಾರ್ಥಿಗಳ ಸಂಖ್ಯೆ | | ಪ್ರತಿಭಾ ಪುರಸ್ಕಾರದ ಮೊತ್ತ (ಪ್ರತಿ ವಿದ್ಯಾರ್ಥಿಗೆ) |
|---|---|---|---|---|
| 1 | ಪದವಿ | 250 | ಒಟ್ಟು – 500 | ರೂ.20000/- |
| | ಸ್ನಾತಕೋತ್ತರ ಪದವಿ | 250 | | |
| 2 | ವೃತ್ತಿಪರ ಪದವಿ | 300 | ಒಟ್ಟು – 500 | ರೂ.25000/- |
| | ವೃತ್ತಿಪರ ಸ್ನಾತಕೋತ್ತರ ಪದವಿ | 200 | | |

4. ಮೀಸಲಾತಿಯ ವಿವರ.

| ಪ್ರವರ್ಗ | ಶೇಕಡವಾರು |
|---|---|
| 1 | 24% |
| 2ಎ | 46% |
| 3ಎ | 14% |
| 3ಬಿ | 16% |
| **ಒಟ್ಟು** | **100%** |

5. ಪ್ರತಿ ಪ್ರವರ್ಗದಲ್ಲಿ ಮಹಿಳಾ ವಿದ್ಯಾರ್ಥಿಗಳಿಗೆ ಶೇ.33 ಹಾಗೂ ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಶೇ.5 (ಮಹಿಳಾ ವಿಶೇಷ ಚೇತನ ವಿದ್ಯಾರ್ಥಿಗಲಿಗೆ ಶೇ.50 ರಷ್ಟು) ಮೀಸಲಾತಿಯನ್ನು ನೀಡಲಾಗುವುದು.
6. ಅರ್ಜಿ ಸಲ್ಲಿಕೆ ಹಾಗೂ ಮಂಜೂರಾತಿ ವಿಧಾನ –
   - ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳು ತಮ್ಮ ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು.
   - ವಿದ್ಯಾರ್ಥಿಯ ಭಾವಚಿತ್ರವನ್ನು JPEG/JPG format ನಲ್ಲಿ 30 KB ಒಳಗೆ ಇರುವಂತೆ ಸಿದ್ಧಪಡಿಸಿಕೊಂಡು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಬೇಕು.
   - ವಿದ್ಯಾರ್ಥಿಯು ತನ್ನ ಆಧಾರ್ ಸಂಖ್ಯೆಯೊಂದಿಗೆ ಲಿಂಕ್ ಆಗಿರುವ ತನ್ನ ಬ್ಯಾಂಕ್ ಖಾತೆ ವಿವರವನ್ನು ಆನ್-ಲೈನ್ ನಲ್ಲಿ ಸಲ್ಲಿಸಬೇಕು ಹಾಗೂ ಆಧಾರ್ ಪ್ರತಿ ಹಾಗೂ ಇದಕ್ಕೆ ಲಿಂಕ್ ಆಗಿರುವ ಬ್ಯಾಂಕ್ ಖಾತೆ ವಿವರ ಇರುವ ಪಾಸ್ ಪುಸ್ತಕದ ಮೊದಲ ಪುಟವನ್ನು (ಬ್ಯಾಂಕ್ ಖಾತೆ ಸಂಖ್ಯೆ, ಬ್ಯಾಂಕ್ ಶಾಖೆ ಮತ್ತು IFSC ಕೋಡ್ ಮಾಹಿತಿ) JPEG/JPG format ನಲ್ಲಿ 100 ರಿಂದ 150 KB ಒಳಗೆ ಇರುವಂತೆ ಸಿದ್ಧಪಡಿಸಿಕೊಂಡು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಬೇಕು.
   - ಇತರೆ ಎಲ್ಲಾ ಅಗತ್ಯ ದಾಖಲೆಗಳನ್ನು JPEG/JPG format ನಲ್ಲಿ 100 ರಿಂದ 150 KB ಒಳಗೆ ಇರುವಂತೆ ಸಿದ್ಧಪಡಿಸಿಕೊಂಡು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಬೇಕು.
   - ಸರಿಯಾದ/ಪೂರ್ಣ ಮಾಹಿತಿ ಮತ್ತು ದಾಖಲೆಗಳನ್ನು ಸಲ್ಲಿಸದ ವಿದ್ಯಾರ್ಥಿಗಳನ್ನು ಸದರಿ ಪ್ರತಿಭಾ ಪುರಸ್ಕಾರಕ್ಕೆ ಪರಿಗಣಿಸಲಾಗುವುದಿಲ್ಲ.
   - ವಿದ್ಯಾರ್ಥಿಗಳು ಗಳಿಸಿದ ಅಂಕಗಳು, ಮೀಸಲಾತಿ ಹಾಗೂ ಅನುದಾನ ಲಭ್ಯತೆಯನ್ವಯ ನಿಗದಿಪಡಿಸಿದ ಭೌತಿಕ ಗುರಿಗನುಗುಣವಾಗಿ ಡಿ. ದೇವರಾಜ ಅರಸು ಪ್ರತಿಭಾ ಪುರಸ್ಕಾರವನ್ನು ಮಂಜೂರು ಮಾಡಲಾಗುವುದು.

7. ಸಿ.ಬಿ.ಎಸ್.ಇ/ ಐ.ಸಿ.ಎಸ್.ಇ ಯಲ್ಲಿ 10ನೇ ತರಗತಿಯನ್ನು ಅಧ್ಯಯನ ಮಾಡಿರುವ ವಿದ್ಯಾರ್ಥಿಗಳ ಮಾಹಿತಿಯು software ನಲ್ಲಿ ಲಭ್ಯವಿಲ್ಲದೆ ಇದ್ದಲ್ಲಿ (ಆನ್–ಲೈನ್ ಅರ್ಜಿ ಸಲ್ಲಿಸಲು ಸಾಧ್ಯವಾಗದೇ ಇದ್ದಲ್ಲಿ) ನಿಮ್ಮ ಜಿಲ್ಲೆಯ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಗೆ ಹೋಗಿ ಎಸ್.ಎಸ್.ಎಲ್.ಸಿ. ರಿಜಿಸ್ಟರ್ ನಂಬರ್, ಜನ್ಮ ದಿನಾಂಕ, ತಂದೆಯ ಮತ್ತು ತಾಯಿಯ ಹೆಸರು, ವಿಶೇಷ ಚೇತನ ಅಭ್ಯರ್ಥಿಯ ಮಾಹಿತಿ ಹಾಗೂ ಶಾಲೆಯ ಹೆಸರು ಮತ್ತು ವಿಳಾಸವನ್ನು software ನಲ್ಲಿ ನಮೂದಿಸಿಕೊಂಡು ನಂತರ ಆನ್–ಲೈನ್ ನಲ್ಲಿ ಅರ್ಜಿ ಸಲ್ಲಿಸುವುದು.

8. ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ವಿಳಾಸವು ಇಲಾಖಾ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.
9. **ಅರ್ಜಿ ಸಲ್ಲಿಸಲು** ಕೊನೆಯ ದಿನಾಂಕ: 08.02.2023, ಸಂಜೆ 5.00 ಗಂಟೆ. ಹೆಚ್ಚಿನ ವಿವರಗಳಿಗಾಗಿ ಇಲಾಖಾ ವೆಬ್‌ಸೈಟ್ https://bcwd.karnataka.gov.in ನೋಡಲು ತಿಳಿಸಿದೆ.

ಸಹಾಯವಾಣಿ ಸಂಖ್ಯೆ: 8050770004 (ಕಛೇರಿ ಕಾರ್ಯನಿರ್ವಹಿಸುವ ಸಮಯ ಬೆಳಗ್ಗೆ 10.00 ರಿಂದ ಸಂಜೆ 5.30ರವರೆಗೆ)

ಆಯುಕ್ತರು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.